# ಲಕ್ಷ್ಮಿ ಬರುವನೆಂದು...



ಪ್ರಸ್ತುತ ಗಾಂಧಿನಗರ ಬಿಡುಗಣ್ಣಾಗಿ ನಿರೀಕ್ಷಿಸುತ್ತಿರುವ 'ಲಕ್ಷ್ಮಿ' ಸ್ತ್ರೀರೂಪಿಯಲ್ಲ, ಪುರುಷರೂಪಿ. 'ಲಕ್ಷ್ಮಿ' ಶಿವರಾಜ್‌ಕುಮಾರ್ ನಟನೆಯ ಚಿತ್ರ. ಹಲವು ಕಾರಣಗಳಿಂದಾಗಿ ಬಿಡುಗಡೆ ಮುಂದಕ್ಕೆ ಹೋಗುತ್ತಲೇ ಬಂದ 'ಲಕ್ಷ್ಮಿ' ಸಂಕ್ರಾಂತಿ ನಂತರದ ಜ.18ರಂದು ತೆರೆ ಕಾಣುತ್ತಿದೆ.

'ನೋ ಒನ್ ಟಚ್ ಮಿ' ಎನ್ನುವುದು 'ಲಕ್ಷ್ಮಿ'ಯ ಅಡಿಬರಹ. ನನ್ನನ್ನು ಯಾರೂ ಮುಟ್ಟಲಿಕ್ಕೆ ಸಾಧ್ಯವಿಲ್ಲ ಎಂದು ಸವಾಲು ಹಾಕುವ ನಾಯಕ ಏಕಕಾಲಕ್ಕೆ ಹೊರಗಿನ ಉಗ್ರಗಾಮಿಗಳನ್ನೂ ಒಳಗಿನ ಭ್ರಷ್ಟರನ್ನೂ ಮಟ್ಟಹಾಕಲು ಪ್ರಯತ್ನಿಸುವುದು ಚಿತ್ರದ ಕಥೆ. ಸಿನಿಮಾ ವಿಶೇಷ ಅನ್ನಿಸಲು ಸಾಕಷ್ಟು ಕಾರಣಗಳನ್ನು ಶಿವಣ್ಣ ನೀಡುತ್ತಾರೆ. 'ಈ ಚಿತ್ರದಲ್ಲಿ ನಾನು ವಿಶೇಷ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ಗೀತೆಗಳು ಚೆನ್ನಾಗಿವೆ, ಈಗಾಗಲೇ ಜನಪ್ರಿಯವೂ ಆಗಿವೆ. ಕಥೆಯಲ್ಲಿ ಸಾಹಸಕ್ಕೆ ಒತ್ತು ಇರುವಂತೆಯೇ ಭಾವನಾತ್ಮಕ ದೃಶ್ಯಗಳಿಗೂ ಆದ್ಯತೆಯಿದೆ. ಹಾಗಾಗಿ ಎಲ್ಲ ವರ್ಗದ ಪ್ರೇಕ್ಷಕರಿಗೆ ಸಿನಿಮಾ ಇಷ್ಟವಾಗುತ್ತದೆ' ಎನ್ನುವ ನಿರೀಕ್ಷೆ ಅವರದು.

ನಿರ್ದೇಶಕ ರಾಘವ್ ಲೋಕಿ ಅವರಿಗೂ 'ಲಕ್ಷ್ಮಿ' ಕಟಾಕ್ಷದ ನಿರೀಕ್ಷೆ. ಶಿವಣ್ಣ ಮಾಸ್ ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಕರೆತಂದರೆ, ಸಿನಿಮಾದ ಶೀರ್ಷಿಕೆ ಮಹಿಳೆಯರನ್ನು ಆಕರ್ಷಿಸಲಿದೆ ಎನ್ನುವುದು ಅವರ ಲೆಕ್ಕಾಚಾರ. 'ಸತ್ಯ ಇನ್ ಲವ್' ಚಿತ್ರದ ನಂತರ 'ಲಕ್ಷ್ಮಿ' ಮೂಲಕ ಶಿವಣ್ಣನವರ ಮತ್ತೊಂದು ಚಿತ್ರ ನಿರ್ದೇಶಿಸಿರುವ ರಾಘವ್ ಲೋಕಿ, ನೈಜ ಘಟನೆಗಳನ್ನು ಆಧರಿಸಿಯೇ ಸಿನಿಮಾ ಮಾಡಿದ್ದಾರಂತೆ.

ಶಿವಣ್ಣನ ಹಿಂದಿನ ಚಿತ್ರ 'ಶಿವ' ಭಾರೀ ನಿರೀಕ್ಷೆ ಮೂಡಿಸಿದರೂ ಬಿಡುಗಡೆ ನಂತರ ಠುಸ್ ಎಂದಿತ್ತು. ಈ ಸೋಲನ್ನು ಗಮನದಲ್ಲಿಟ್ಟುಕೊಂಡೇ 'ಲಕ್ಷ್ಮಿ'ಯನ್ನು ಗೆಲ್ಲಿಸಲು ಚಿತ್ರತಂಡ ಹಟ ತೊಟ್ಟಿದೆ. ಚಿತ್ರ ಗೆದ್ದಲ್ಲಿ ಕನ್ನಡ ಚಿತ್ರರಂಗ ಹೊಸ ವರ್ಷವನ್ನು ಶುಭಾರಂಭದ ಮೂಲಕ ಸ್ವಾಗತಿಸಿದಂತೆ ಆಗುತ್ತದೆ.

■ ರಘು

